'ಏಳು.'

ಲೈಟರ್ ಇದುವರೆಗೂ ಹುಡುಗನಿಗೆ ಸಹಕರಿಸಿತ್ತು, ಹಾಗೂ ಅವನಿಗೆ ಅದರ ಮೇಲೆ ದೃಢವಾದ ವಿಶ್ವಾಸವಿತ್ತು. ಅವನ ಬಲಗೈಯ ಹೆಬ್ಬೆರಳು ಲೈಟರಿನ ಜತೆ ಸಂಪೂರ್ಣವಾಗಿ ತಾದ್ಯಾತ್ಮತೆ ಹೊಂದಿತ್ತು. ಮತ್ತೊಮ್ಮೆ ಹುಡುಗನ ಬೆರಳು ನೆಟ್ಟಗಾಯಿತು. ಮುಚ್ಚಳ ಚಂಗನೆ ಮೇಲೆದ್ದಿತು. ಹಾಗೆಯೇ ವೀಲನ್ನು ಘರ್ಷಿಸಿತು. ಬೆಂಕಿ ಹತ್ತಿತು.

'ಎಂಟು!'

ನಾನು ಗಟ್ಟಿಯಾಗಿ ಕೂಗಿ ಹೇಳುವುದಕ್ಕೂ ಮುದುಕನ ರೂಮಿನ ಮುಂಬಾಗಿಲು ತೆರೆಯುವುದಕ್ಕೂ ಸರಿಯಾಯಿತು. ನಾವೆಲ್ಲಾ ಒಮ್ಮೆಲೆ ತಿರುಗಿದೆವು. ಬಾಗಿಲ ಬಳಿ ಒಬ್ಬಳು ಕುಳ್ಳನೆ, ದಟ್ಟ ಕಪ್ಪು ಕೂದಲಿನ ಸ್ವಲ್ಪ ವಯಸ್ಸಾದ ಹೆಂಗಸು ನಿಂತಿದ್ದಳು. ಸ್ವಲ್ಪ ಹೊತ್ತು ಹಾಗೆಯೇ ನಿಂತಿದ್ದು ಅವಳು ಸುತ್ತಲೂ ದೃಷ್ಟಿ ಹರಿಸಿದಳು. ನಂತರ ಆಕೆ ಬಿರುಗಾಳಿಯಂತೆ ಒಳಗೆ ಬಂದಳು. 'ಕಾರ್ಲೋಸ್! ಕಾರ್ಲೋಸ್!!...' ಎಂದು ಚೀರುತ್ತಾ ಬಂದು ಅವಳು ಮುದುಕನ ಕೈಯನ್ನು ಬಲವಾಗಿ ಹಿಡಿದಳು. ಅವನ ಕೈಯಲ್ಲಿನ ಕತ್ತಿಯನ್ನು ಬೇರ್ಪಡಿಸಿ ಬೆಡ್ಡಿನ ಮೇಲೆ ಎಸೆದಳು. ನಂತರ ಮುದುಕನ ಕಾಲರನ್ನು ಬಿಗಿಯಾಗಿ ಹಿಡಿದು ಆವೇಶ ಬಂದವಳಂತೆ ಜೋರಾಗಿ ಕೂಗತೊಡಗಿದಳು. ನನಗದು ಸ್ಪ್ಯಾನಿಶ್ ಭಾಷೆಯಂತೆ ತೋರಿತು. ಅವಳು ಮುದುಕನನ್ನು ಎಷ್ಟು ಜೋರಾಗಿ ಅಲ್ಲಾಡಿಸುತ್ತಿದ್ದಳೆಂದರೆ, ಮುದುಕ ನಮಗೆ ಕಾಣಿಸುತ್ತಿರಲೇ ಇಲ್ಲ! ಜೋರಾಗಿ ತಿರುಗುತ್ತಿರುವ ಸೈಕಲ್ ಚಕ್ರದ ಕಡ್ಡಿಗಳಂತೆ!

ಅವಳಿಗೆ ಸಾಕಾಯ್ತು ಎನಿಸುತ್ತದೆ. ಅವಳು ವೇಗ ಕಡಿಮೆ ಮಾಡಿದಾಗ ನಮಗೆ ಮುದುಕನ ಮುಖ ಕಾಣತೊಡಗಿತು. ಅವಳು ಹೆಚ್ಚು ಕಮ್ಮಿ ಮುದುಕನನ್ನು ಎತ್ತಿ ಹಾಸಿಗೆ ಮೇಲೆ ಹಾಕಿದಳು. ಮುದುಕ ಆಗತಾನೇ ನಿದ್ದೆಯಿಂದ ಎದ್ದವನಂತೆ ಪಿಳಿ ಪಿಳಿ ಕಣ್ಣು ಬಿಡತೊಡಗಿದ.

'ಇಷ್ಟೆಲ್ಲಾ ರಾದ್ಧಾಂತಕ್ಕಾಗಿ ನಾನು ನಿಮ್ಮ ಕ್ಷಮೆಯನ್ನು ಯಾಚಿಸುತ್ತೇನೆ' ಎಂದು ಹೆಂಗಸು ನಮ್ಮ ಬಳಿಗೆ ಬಂದು ಹೇಳಿದಳು. 'ಒಂದು ಹತ್ತು ನಿಮಿಷ ನಾನು ಕಾಣದಿದ್ದರೆ ಸಾಕು ಇವರು ಏನಾದರೂ ಫಜೀತಿಗಿಟ್ಟುಕೊಳ್ಳುತ್ತಾರೆ. ಇಷ್ಟಕ್ಕೆಲ್ಲಾ ನಾನೇ ಕಾರಣ. ದಯವಿಟ್ಟು ಕ್ಷಮಿಸಿ' ಎಂದಳು ಮತ್ತೊಮ್ಮೆ.

ಹುಡುಗ ಮೊಳೆಗಳ ಮಧ್ಯದಿಂದ ಕೈಯನ್ನು ಬಿಡಿಸಿಕೊಳ್ಳುತ್ತಿದ್ದ. ನಾನು ಮತ್ತು ಇಂಗ್ಲಿಷ್ ಹುಡುಗಿ ಗರಬಡಿದವರಂತೆ ಮೂಕರಾಗಿದ್ದೆವು.

'ನನ್ನಿಂದ ಇವರ ಕಿತಾಪತಿ ತಡೆಯಲಸಾಧ್ಯವಾಗಿದೆ. ಊರಲ್ಲಿ ಈಗಾಗಲೇ ಇವರು ನಲ್ವತ್ತೇಳು ಬೆರಳುಗಳನ್ನು ಸಂಗ್ರಹಿಸಿಯಾಗಿದೆ. ಹನ್ನೊಂದು ಕಾರುಗಳನ್ನು ಕಳೆದುಕೊಂಡಾಗಿದೆ. ಇವರಿಗೆ ಆಸ್ಪತ್ರೆಗೆ ಸೇರಿಸಬೇಕೆಂದು ನಿರ್ಧರಿಸಿಯಾಗಿತ್ತು. ಅದರ ಮೊದಲು ಇಲ್ಲಾದರೂ ಸರಿಯಾಗಬಹುದೇನೋ ಎಂದು ಕರೆದುಕೊಂಡು ಬಂದೆ.' ಅವಳು ತುಂಬಾ ಹತಾಶಳಾದಂತೆ ಕಂಡು ಬಂದಳು.

'ನಾವು ಒಂದು ಸಣ್ಣ ಪಣ ಕಟ್ಟಿದ್ದೆವು...' ಮುದುಕ ಹೆಂಡತಿಗೆ ಸಮಜಾಯಿಷಿ ಕೊಡಲು ನೋಡಿದ.

'ಇವರು ಕಾರನ್ನು ಪಣವೊಡ್ಡಿರಬೇಕು?...' ಆಕೆ ನಮ್ಮ ಕಡೆಗೆ ತಿರುಗಿದಳು.

'ಹೌದೌದು... ಹಸಿರು ಕ್ಯಾಡಿಲಾಕ್ ಕಾರು.' ಹುಡುಗ ಹೇಳಿದ.

'ಬೇಸರದ ಸಂಗತಿ ಏನೆಂದರೆ ಅದು ನನ್ನ ಕಾರು. ಅವರದಲ್ಲ! ನಿಜವಾಗಲೂ ನನಗೆ